ಕರ್ನಾಟಕ ಪರೀಕ್ಷಾ ಪ್ರಾಧಿಕಾರ

Karnataka Examinations Authority

ಸಂಖ್ಯೆ: ಇಡಿ/ಕೆಇಎ/ಯುಜಿನೀಟ್/2023

ದಿನಾಂಕ: 23-08-2023

## ಪ್ರಕಟಣೆ

### ವೈದ್ಯಕೀಯ/ದಂತವೈದ್ಯಕೀಯ ಯುಜಿನೀಟ್-2023ಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆ ಮತ್ತು ಆಯುಷ್- ಅರ್ಜಿ ಸಲ್ಲಿಸುವಿಕೆ

ಅಭ್ಯರ್ಥಿಗಳ ಆಸಕ್ತಿಯನ್ನು ಪರಿಗಣಿಸಿ ಯುಜಿನೀಟ್-2023ಕ್ಕೆ ನೊಂದಣಿ ಮಾಡಿಕೊಳ್ಳಲು ಹಲವು ಬಾರಿ ದಿನಾಂಕವನ್ನು ವಿಸ್ತರಿಸಲಾಗಿದೆ. ಆದರೂ ಅಭ್ಯರ್ಥಿಗಳು ಯುಜಿನೀಟ್-2023 ನೊಂದಣಿಗಾಗಿ ಪ್ರಾಧಿಕಾರವನ್ನು ಕೋರಿ ಸೀಟು ಹಂಚಿಕೆಗೆ ಪರಿಗಣಿಸಲು ಮನವಿ ಸಲ್ಲಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಆನ್‌ಲೈನ್ ಮೂಲಕ ಇಲ್ಲಿಯವರೆಗೆ ನೊಂದಣಿಯನ್ನು ಮಾಡದೆ ಇರುವ ಆಸಕ್ತ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೊಂದಣಿ ಮಾಡಿ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಬಹುದಾಗಿರುತ್ತದೆ ಹಾಗು ಇತರೆ ಅಭ್ಯರ್ಥಿಗಳೊಂದಿಗೆ ಎರಡನೇ ಸುತ್ತಿನಲ್ಲಿ ಲಭ್ಯವಾಗುವ ಸೀಟುಗಳಿಗೆ ಮಾತ್ರ ಹಾಜರಾಗಬಹುದು. ಯುಜಿನೀಟ್-2023 ರ 'ಸಿ' ಮತ್ತು 'ಡಿ' ಅರ್ಹತಾ ಕಂಡಿಕೆಯ ಅಭ್ಯರ್ಥಿಗಳಿಗೆ ಈಗಾಗಲೆ ಎರಡು ಬಾರಿ ಕನ್ನಡ ಭಾಷೆ ಪರೀಕ್ಷೆಯನ್ನು ದಿನಾಂಕ 25-07-2023 ಮತ್ತು 01-08-2023ರಂದು ನಡೆಸಿರುವುದರಿಂದ, ಪ್ರಸ್ತುತ ವಿಸ್ತರಣೆಯಾಗಿರುವ ದಿನಾಂಕಗಳಲ್ಲಿ 'ಸಿ' ಅಥವಾ 'ಡಿ' ಅರ್ಹತಾ ಕಂಡಿಕೆಯನ್ನು ಕ್ಲೇಮ್ ಮಾಡಲು ಅರ್ಹತೆ ಪಡೆಯುವುದಿಲ್ಲ.

ನೊಂದಣಿ ಮಾಡಿ ಅರ್ಜಿ ಸಲ್ಲಿಸುವಿಕೆಯನ್ನು ಪೂರ್ಣ ಮಾಡದೇ ಇರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಪೂರ್ಣವಾಗಿ ಭರ್ತಿಮಾಡಿ ಶುಲ್ಕವನ್ನು ಪಾವತಿಸಬಹುದಾಗಿದೆ.

***ನೊಂದಣಿ-ಅರ್ಜಿ ಸಲ್ಲಿಸುವುದು- ಶುಲ್ಕ ಪಾವತಿ:-24-08-2023 ರ ಸಂ.6.00 ರಿಂದ 25-08-2023-11.59 ರವರೆಗೆ***

***ದಾಖಲೆಗಳ ಪರಿಶೀಲನೆ:- 28-08-2023 - ಬೆ. 11.00 ರಿಂದ ಮ. 1.00 ರವರೆಗೆ***

ಯುಜಿನೀಟ್-2023ಕ್ಕೆ ಈ ಮೇಲಿನ ದಿನಾಂಕಗಳಂದು ನೊಂದಣಿ ಮಾಡಿ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸುವ ಅಭ್ಯರ್ಥಿಗಳು ಪ್ರಾಧಿಕಾರದಲ್ಲಿ ದಾಖಲೆಗಳ ಪರಿಶೀಲನೆಗೆ ಹಾಜರಾಗಬಹುದು. (ವೆರಿಫಿಕೇಶನ್ ಸ್ಲಿಪ್ ಪಡೆಯದೆ ಇರುವ ಅಭ್ಯರ್ಥಿಗಳು ಮಾತ್ರ) ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅರ್ಹತೆಯ ಬಗ್ಗೆ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಪಡೆಯಬಹುದು.

SC / ST / OBC ಅರ್ಹತಾ ಮಾನದಂಡಗಳು ಕರ್ನಾಟಕ SC / ST / OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ. ಕರ್ನಾಟಕೇತರ ಅಭ್ಯರ್ಥಿಗಳು NEET-UG 2023 ನಲ್ಲಿ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಮಾತ್ರ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ನೊಂದಣಿ ಮಾಡಿಕೊಳ್ಳಲು ಅರ್ಹರಿರುತ್ತಾರೆ.

ಯುಜಿನೀಟ್ - 2023 ರಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ವೈದ್ಯಕೀಯ / ದಂತ ವೈದ್ಯಕೀಯ / **ಆಯುರ್ವೇದ, ಯುನಾನಿ, ಹೋಮಿಯೋಪತಿ** ಪದವಿ ಕೋರ್ಸುಗಳ ಪ್ರವೇಶಕ್ಕೆ ಹೆಚ್ಚಿನ ಮಾಹಿತಿಯನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಪಡೆಯಬಹುದಾಗಿದೆ.

ಪ್ರಸ್ತುತ ನೊಂದಾಯಿಸುತ್ತಿರುವ ಅಭ್ಯರ್ಥಿಗಳು ಅಥವಾ ಈ ಹಂತದಲ್ಲಿ ದಾಖಲೆಗಳ ಪರಿಶೀಲನೆಗೆ ಹಾಜರಾಗುತ್ತಿರುವ ಅಭ್ಯರ್ಥಿಗಳು ಇತರ ಅರ್ಹ ಅಭ್ಯರ್ಥಿಗಳೊಂದಿಗೆ ಲಭ್ಯವಾಗುವ ಸೀಟುಗಳಿಗೆ ಮಾತ್ರ ಅರ್ಹರಾಗಿರುತ್ತಾರೆ ಎಂಬುದನ್ನು ಗಮನಿಸಿ.

ಕಾರ್ಯನಿರ್ವಾಹಕ ನಿರ್ದೇಶಕರು.


18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012

18th Cross, Sampige Road, Malleshwaram, Bengaluru - 560 012.

Phone: 080 - 23 564 583, 23 460 460, 23 361 786, Fax: 080 - 23 461 576

e-mail : keauthority-ka@nic.in Website : http://kea.kar.nic.in